ದಿನಾಂಕ : 12-08-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

(**ಸಾಕ್ಷಿಯನ್ನು ವಿಡಿಯೋ ಕಾನ್ಸರೆನ್ಸ ಮುಖಾಂತರ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಾವು ಬೆಂಗಳೂರಿನ ತಮ್ಮ ಮನೆಯಿಂದ ತಮ್ಮ ಮೊಬೈಲ್ ಆಪ್ ನಿಂದ ನ್ಯಾಯಾಲಯದ ಗೂಗಲ್ ಮೀಟ್ ಆ್ಯಪ್ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ. ಕೋಆರ್ಡಿನೇಟರ ಆಗಿ ಮಗಳು ಸಾಕ್ಷಿ ರವರು ಹಾಜರಾಗಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಸಾಕ್ಷಿಯಿಂದ ಖಾತರಿಪಡಿಸಿಕೊಂಡು ನ್ಯಾಯಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಎಸ್.ಎಸ್.ಪಾಟೀಲ ರವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ಆರೋಪಿ ಪರ ವಕೀಲರು ಹಾಗೂ ಸರ್ಕಾರಿ ವಕೀಲರ ಉಪಸ್ಥಿತಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿಚಾರಣೆಯನ್ನು ವಿಡಿಯೋ ಕಾನ್ಸರೆನ್ಸ ಮುಖಾಂತರ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಮ್ಮ ಹತ್ತಿರ ಈ ಪ್ರಕರಣದ ಕಡತವು ಇರುವುದಾಗಿ ನುಡಿಯುತ್ತಾರೆ.**)

**ಪಾಟೀ ಸವಾಲುಃ 1, 2, 5, 6 ಮತ್ತು 9 ನೇ ಆರೋಪಿತರ ಪರ ಶ್ರೀ.ಆರ್.ಸಿ.ಪಿ ವಕೀಲರಿಂದ**

14. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾದಾಗ ಅದರ ತನಿಖೆಯನ್ನು ಡಿ.ವೈ.ಎಸ್.ಪಿ ಅವರೇ ಮಾಡಬೇಕಾಗುತ್ತದೆ ಎನ್ನುವ ನಿಯಮ ಇದೆ ಎನ್ನುವುದು ನನಗೆ ಗೊತ್ತಿರುತ್ತದೆ. ದಿನಾಂಕಃ 02-10-2015 ರಿಂದ ದಿನಾಂಕಃ 04-10-2015 ರವರೆಗೆ ನಾನು ರಜೆ ಮೇಲೆ ಇದ್ದ ಕಾರಣ ದಿನಾಂಕಃ 05-10-2015 ರಂದು ನಾನು ಈ ಪ್ರಕರಣದ ತನಿಖೆಯನ್ನು ವಹಿಸಿಕೊಂಡಿದ್ದೇನೆ.

15. ದಿನಾಂಕಃ 02-10-2015 ರಂದು ಪ್ರಕರಣ ನೊಂದಣಿ ಆದ ನಂತರ ನಮ್ಮ ಕಚೇರಿಗೆ ಇ-ಮೇಲ ಮುಖಾಂತರ ಮಾಹಿತಿ ಬಂದಿರಬಹುದು, ಆದರೆ ನಾನು ಆ ದಿನ ರಜೆ ಇದ್ದ ಕಾರಣ ನನಗೆ ಮಾಹಿತಿ ಇರುವುದಿಲ್ಲ.

16. ದಿನಾಂಕಃ 02-10-2015 ರಂದು ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇದ್ದು, ಸದರಿ ಪ್ರಕರಣ ಸುಳ್ಳು ಪ್ರಕರಣ ಎಂದು, ಅದನ್ನು ನಾನು ತನಿಖೆ ಮಾಡುವುದಿಲ್ಲ ಎಂದು, ನಾನು ಉದ್ದೇಶಪೂರ್ವಕವಾಗಿ ಮೂರು ದಿನಗಳವರೆಗೆ ತನಿಖೆಯನ್ನು ಮಾಡಿರುವುದಿಲ್ಲ

ಎನ್ನುವುದು ಸರಿಯಲ್ಲ.

17. ದಿನಾಂಕಃ 05-10-2015 ರಂದು ನನಗೆ ಇಷ್ಟ ಇಲ್ಲದೇ ಇದ್ದರೂ ಎಸ್.ಪಿ ರವರ ಆದೇಶದ ಮೇರೆಗೆ ತನಿಖೆಯನ್ನು ಕೈಗೊಂಡಿದ್ದೇನೆ ಎನ್ನುವುದು ಸರಿಯಲ್ಲ. ದಿನಾಂಕಃ 01-10-2015 ರಂದು ಈ ಪ್ರಕರಣದ 2ನೇ ಆರೋಪಿ ಚಾಸಾಃ 6 ಬೈರು ಚೌಗಲಾ ಅವರ ಅಣ್ಣ ತಮ್ಮಂದಿರ ಮೇಲೆ ಅಪರಾಧ ಸಂಖ್ಯೆ 249/2015 ರಂತೆ ಪ್ರಕರಣವನ್ನು ದಾಖಲಿಸಿದ್ದು, ಅದು ನನ್ನ ಗಮನದಲ್ಲಿತ್ತು ಎನ್ನುವುದಕ್ಕೆ ಸಾಕ್ಷಿ ಅದು ನನಗೆ ಈಗ ನೆನಪಿಲ್ಲ ಎಂದು, ಆ ಪ್ರಕರಣಕ್ಕೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದು ಹೇಳಿದ್ದಾರೆ.

18. ದಿನಾಂಕಃ 01-10-2015 ರಂದು ನಾನು ಕರ್ತವ್ಯದಲ್ಲಿದ್ದೆ ಎನ್ನುವುದು ಸರಿ. ಪ್ರತಿಯೊಂದು ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿ ದಾಖಲಾದ ನಂತರ ಮೇಲಾಧಿಕಾರಿಗಳಿಗೆ ಇ-ಮೇಲ್ ಮೂಲಕ ಕಳುಹಿಸಲಾಗುತ್ತದೆ ಎನ್ನುವುದು ಸರಿ.

19. ಚೌಗಲಾ ಕುಟುಂಬದವರಿಗೂ ಮತ್ತು ಹಳಿಜೋಳೆ ಕುಟುಂಬದವರಿಗೂ ಮೊದಲಿನಿಂದಲೂ ವೈಮನಸ್ಸು ಇತ್ತು ಎಂದು ನನಗೆ ತಿಳಿದಿದೆ ಎನ್ನುವುದು ಸರಿಯಲ್ಲ. ಈ ವಿಚಾರದಲ್ಲಿ ನಾನು ತನಿಖೆಯನ್ನು ಮಾಡಿದ್ದು, ಆ ರೀತಿ ವೈಮನಸ್ಸು ಇರುವುದು ಕಂಡುಬಂದಿರುವುದಿಲ್ಲ.

20. 2016 ನೇ ಇಸವಿಯಲ್ಲಿ ಚಾಸಾಃ 7 ರವರ ತಂಗಿ 1ನೇ ಆರೋಪಿಯ ವಿರುದ್ಧ ಕುಡುಚಿ ಪೋಲಿಸ ಠಾಣೆಯಲ್ಲಿ ಸಿಸಿ ನಂಬರ 780/2016 ರಂತೆ ಪ್ರಕರಣ ಮಾಡಿದ್ದು ನನಗೆ ಗೊತ್ತಿರುವುದಿಲ್ಲ. ಚೌಗಲಾ ಕುಟುಂಬದವರಿಗೂ ಮತ್ತು ಹಳಿಜೋಳೆ ಕುಟುಂಬದವರಿಗೂ ಮೊದಲಿನಿಂದಲೂ ವೈಷಮ್ಯ ಇದೆ ಎಂದು ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

21. 1ನೇ ಆರೋಪಿ ಮತ್ತು ಚಾಸಾಃ 7 ಬೈರಪ್ಪ ಚೌಗಲಾ ಇವರ ಮಧ್ಯೆ ಸಿವಿಲ್ ವ್ಯಾಜ್ಯಗಳು ಇದ್ದವು ಎಂದು ನನ್ನ ತನಿಖಾ ಸಮಯದಲ್ಲಿ ಕಂಡುಬಂದಿತ್ತು ಎನ್ನುವುದು ಸರಿಯಲ್ಲ. 2015 ನೇ ಸಾಲಿನಲ್ಲಿ 7ನೇ ಆರೋಪಿ ಗಿರಿಜಾ ಹಳಿಜೋಳ ಚಾಸಾಃ 6 ಫಿರೋಜ ಚೌಗಲಾ ಅವರು ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ.

22. ಚಾಸಾಃ 7 ಬೈರಪ್ಪ ಚೌಗಲಾ ಅವರ ತಮ್ಮ ಲಗಮಣ್ಣ ಅವರು ತೀರಿಕೊಂಡ ನಂತರ ಆತನ ಹೆಂಡತಿ 1ನೇ ಆರೋಪಿಯನ್ನು ಪುನರ್ ವಿವಾಹ ಮಾಡಿಕೊಂಡ ಕಾರಣ ಚೌಗಲಾ ಕುಟುಂಬಕ್ಕೂ, ಹಳಿಜೋಳ ಕುಟುಂಬಕ್ಕೂ ವೈಷ್ಯಮ್ಯ ಇತ್ತು ಎನ್ನುವುದು ಸರಿಯಲ್ಲ. ಆ ಕಾರಣ ಚೌಗಲಾ ಕುಟುಂಬದವರು ಆರೋಪಿತರನ್ನು ಯಾವುದಾದರೂ ಪ್ರಕರಣದಲ್ಲಿ ಸೇರಿಸಬೇಕು ಎನ್ನುವ ಉದ್ದೇಶದಿಂದ ಈ ಪ್ರಕರಣದಲ್ಲಿ ಸೇರಿಸಿದ್ದಾರೆ ಎನ್ನುವುದು ಸರಿಯಲ್ಲ.

23. ಚಾಸಾಃ 7 ಬೈರಪ್ಪ ಚೌಗಲಾ ಮತ್ತು ಅವರ ತಂಗಿ ಸೇರಿ, 3 ನೇ ಆರೋಪಿ ಸುಕುಮಾರ ಹಳಿಜೋಳ ಅವರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದಾರೆ ಎಂದು ಹೇಳಿ 3ನೇ ಆರೋಪಿ ದೂರು ಕೊಟ್ಟಿದ್ದರು ಎನ್ನುವುದಕ್ಕೆ ಸಾಕ್ಷಿ ಇರಬಹುದು ಆದರೆ ಈ ಘಟನೆಗೆ ಅದು ಸಂಬಂಧ ಇಲ್ಲ ಎಂದು ಹೇಳಿದ್ದಾರೆ.

24. ಆರೋಪಿತರು ಚಾಸಾಃ 7 ಬೈರಪ್ಪ ಚೌಗಲಾ ಹಾಗೂ ಕುಡಚಿ ಪೋಲಿಸ ಠಾಣೆಯ ಪಿ.ಎಸ್.ಐ ಮತ್ತು ಸಿ.ಪಿ.ಐ ರವರ ವಿರುದ್ಧ ಐ.ಜಿ ಅವರಿಗೆ ದೂರು ಕೊಟ್ಟಿದ್ದು ಅದು ನನ್ನ ಗಮನದಲ್ಲಿತ್ತು ಎನ್ನುವುದು ಸರಿಯಲ್ಲ.

25. ಚಾಸಾಃ 6 ಫಿರೋಜ ಚೌಗಲಾ,ಚಾಸಾಃ 7 ಬೈರಪ್ಪ ಚೌಗಲಾ ಮತ್ತು ಅವರ ಕುಟುಂಬದವರು ಚಿಟ್ ಫಂಡ್ ನಡೆಸುತ್ತಿದ್ದು, ಅದರಲ್ಲಿ ಹೆಚ್ಚಿನ ಹಣಕ್ಕೆ ಬಿಡ್

ಮಾಡಿದವರಿಗೆ ಹಣ ಕೊಡುತ್ತಿದ್ದರು ಎಂದು, ಆ ರೀತಿ ಬಿಡ್ ಮಾಡಿದವರಿಗೆ ಹಣವನ್ನು ಕಟ್ಟಲು ಆಗದೇ ಇದ್ದಾಗ ಆ ಹಣದ ಬಾಬ್ತು ಅವರ ಆಸ್ತಿ ಮತ್ತು ವಾಹನಗಳನ್ನು ತಮ್ಮ ಹೆಸರಿಗೆ ಬರೆಸಿಕೊಳ್ಳುತ್ತಿದ್ದರು, ಆ ವಿಚಾರ ನನ್ನ ಗಮನದಲ್ಲಿತ್ತು ಎನ್ನುವುದು ಸರಿಯಲ್ಲ. ಈ ವಿಚಾರವಾಗಿ 1ನೇ ಆರೋಪಿ ಚಾಸಾಃ 6, ಚಾಸಾಃ7 ಮತ್ತು ಅವರ ಕುಟುಂಬದವರ ವಿರುದ್ಧ ದನಿ ಎತ್ತಿ ಪ್ರತಿಭಟಿಸಿದ್ದರಿಂದ ಮತ್ತು ಎಸ್.ಪಿ ರವರಿಗೆ ದೂರು ಕೊಟ್ಟಿದ್ದರಿಂದ ಆರೋಪಿತರ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎನ್ನುವುದು ಸರಿಯಲ್ಲ.

26. ಕುಡಚಿ ಪೋಲಿಸ ಠಾಣೆಯ ಪೇದೆ ಬೋರಗಲ್ ಅವರ ವಿರುದ್ಧ ಕರ್ನಾಟಕ ಲೋಕಾಯುಕ್ತ ಪೋಲಿಸ ಠಾಣೆಯಲ್ಲಿ ದೂರು ದಾಖಲಾದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈ ವಿಚಾರಗಳು ನನ್ನ ಗಮನದಲ್ಲಿದ್ದರೂ ಸಹ ಚಾಸಾಃ 6 ಮತ್ತು ಚಾಸಾಃ7 ರವರ ಮಾತು ಕೇಳಿ ಆರೋಪಿತರ ವಿರುದ್ಧ ಪ್ರಕರಣ ದಾಖಲಾಗಲು ನಾನು ಸಹಕರಿಸಿದ್ದೇನೆ ಎನ್ನುವುದು ಸರಿಯಲ್ಲ.

27. ಕೃತ್ಯ ನಡೆಯಿತು ಎನ್ನುವ ಸ್ಥಳದಲ್ಲಿ ಪಾನಶಪ್ ಇಲ್ಲದೇ ಇದ್ದರೂ ಸಹ ಚಾಸಾಃ 13 ರವರ ಮೇಲೆ ಪ್ರಭಾವ ಬೀರಿ ನಿಪಿ-4 ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಕೇಶವ ಮಾವರಕರ ಅವರ ಮನೆಯ ಉತಾರೆಯನ್ನು ನಾನು ಪಡೆದುಕೊಂಡಿದ್ದೇನೆ, ಅದರಲ್ಲಿ ಟೇಲರಿಂಗ್ ಅಂಗಡಿ ಇರುವ ಬಗ್ಗೆ, ಕಾಂಪ್ಲೇಕ್ಸ ಇರುವ ಬಗ್ಗೆ ನಮೂದು ಇಲ್ಲ ಎನ್ನುವುದಕ್ಕೆ ಸಾಕ್ಷಿ ಆ ರೀತಿ ಬರೆದಿಲ್ಲ ಆದರೆ ವಾಸ್ತವದಲ್ಲಿ ಟೇಲರಿಂಗ್ ಅಂಗಡಿ ಮತ್ತು ಕಾಂಪ್ಲೇಕ್ಸ ಇದೆ ಎಂದು ಹೇಳಿದ್ದಾರೆ.

28. ಕೇಶವ ಮಾವರಕರ ಅವರು ಮನೆಯನ್ನೂ ಹೊಂದಿದ್ದರೂ ಸಹ ಅದರಲ್ಲಿ ಟೇಲರಿಂಗ್ ಅಂಗಡಿ ಮತ್ತು ಕಾಂಪ್ಲೇಕ್ಸ ಇದೆ ಎಂದು ಚಾಸಾಃ 6 ಮತ್ತು ಚಾಸಾಃ7 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾಃ6 ಮತ್ತು ಚಾಸಾಃ 7

ರವರು ರಾಜಕೀಯವಾಗಿ ಪ್ರಬಲರಾಗಿದ್ದು, ಅವರಿಗೆ ಸಹಾಯ ಮಾಡಲು ಮತ್ತು ಆರೋಪಿತರಿಗೆ ತೊಂದರೆ ಕೊಡಲು ದಾಖಲೆಗಳನ್ನು ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ.

29. ದಿನಾಂಕಃ 01-10-2015 ರಂದು 2ನೇ ಆರೋಪಿ ಚಾಸಾಃ 7 ಮತ್ತು ಅವರ ಕುಟುಂಬದವರ ವಿರುದ್ಧ ದೂರು ಕೊಟ್ಟಿದ್ದು, ಸದರಿ ದೂರುದಾರರ ವಿರುದ್ಧ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಸಿದರೆ ಅವರು ಹೆದರಿಕೊಂಡು ರಾಜಿ ಮಾಡಿಕೊಳ್ಳುತ್ತಾರೆ ಎನ್ನುವ ಕಾರಣಕ್ಕೆ ಈ ಸುಳ್ಳು ಪ್ರಕರಣವನ್ನು ದಾಖಲು ಮಾಡಲಾಗಿದೆ ಎನ್ನುವುದು ಸರಿಯಲ್ಲ.

30. ದಿನಾಂಕಃ 05-10-2015 ರಂದು ಎಸ್.ಪಿ ಬೆಳಗಾವಿ ಅವರ ಆದೇಶದ ಮೇರೆಗೆ ಚಾಸಾಃ 22 ಪಿ.ಎಸ್.ಐ ರವರಿಂದ ಈ ಪ್ರಕರಣ ತನಿಖೆಯನ್ನು ವಹಿಸಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ತನಿಖೆಯನ್ನು ವಹಿಸಿಕೊಂಡು ದಿನವೇ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾಃ 2 ಮತ್ತು ಚಾಸಾಃ 3 ರವರನ್ನು ಕರೆಸಿಕೊಂಡು ಚಾಸಾಃ 1 ರವರು ತೋರಿಸಿದ ಸ್ಥಳದಲ್ಲಿ ನಿಪಿ-7 ರಂತೆ ಪಂಚನಾಮೆ ಮಾಡಿದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ನಿಪಿ-12 ರಂತೆ ಕಚ್ಚಾ ನಕ್ಷೆಯನ್ನು ತಯಾರಿಸಿ ಪೋಟೋ ತೆಗೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

31. ದಿನಾಂಕಃ 05-10-2015 ರಂದು ಚಾಸಾಃ 1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಯಲ್ಲ. ದಿನಾಂಕಃ06-10-2015 ರಂದು ಕೃತ್ಯ ನಡೆದ ಸ್ಥಳದ ನಕ್ಷೆ ತಯಾರಿಸಿಕೊಡುವಂತೆ ಚಾಸಾಃ 11 ರವರಿಗೆ ಹಾಗೂ ಆರೋಪಿತರ ಮತ್ತು

ದೂರುದಾರರ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಚಾಸಾಃ 10 ರವರಿಗೆ ಮನವಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

32. ಚಾಸಾಃ 13 ರವರಿಗೆ ಟೇಲರಿಂಗ್ ಅಂಗಡಿ ಮತ್ತು ಪಾನಶಪ್ ಇರುವ ಬಗ್ಗೆ ದಾಖಲೆ ನೀಡುವಂತೆ ಮನವಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಯಲ್ಲ. ದಿನಾಂಕಃ 20-10-2015 ರಂದು ಚಾಸಾಃ 11 ರವರಿಂದ ನಿಪಿ-1 ರಂತೆ ನಕ್ಷೆ ತಯಾರಿಸಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-1 ನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. 3 ರಿಂದ 11 ನೇ ಆರೋಪಿತರು ತಲೆಮರೆಸಿಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಯಲ್ಲ. ಆರೋಪಿತರು ಎಂದೂ ತಲೆಮರೆಸಿಕೊಂಡಿರಲಿಲ್ಲ , ಅವರೆಲ್ಲರೂ ತಮ್ಮ ಊರಿನಲ್ಲಿ ತಮ್ಮ ತಮ್ಮ ಮನೆಯಲ್ಲಿದ್ದರು ಎನ್ನುವುದು ಸರಿಯಲ್ಲ. ಪ್ರಕರಣಕ್ಕೆ ಅನುಕೂಲ ಮಾಡುವ ಉದ್ದೇಶದಿಂದ ಆ ರೀತಿ ಸುಳ್ಳು ವರದಿಗಳನ್ನು ನನ್ನ ಕಿರಿಯ ಅಧಿಕಾರಿಗಳಿಂದ ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ.

33. ಚಾಸಾಃ 1, ಚಾಸಾಃ 4 ಮತ್ತು ಚಾಸಾಃ 5 ರವರಿಗೆ ಯಾವುದೇ ರೀತಿಯ ಗಾಯಗಳು ಆಗದೇ ಇದ್ದರೂ ಸಹ ನಿಪಿ-8, ನಿಪಿ-9 ಮತ್ತು ನಿಪಿ-10 ರಂತೆ ಸುಳ್ಳು ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ.

34. ದಿನಾಂಕಃ 29-11-2015 ರಂದು 1 ಮತ್ತು 2ನೇ ಆರೋಪಿತರನ್ನು ಮನೆಯಿಂದ ಕರೆದುಕೊಂಡು ಬಂದು ದಸ್ತಗಿರಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. ದೂರಿನಲ್ಲಿ ಹೇಳಿದಂತ ಯಾವುದೇ ಘಟನೆ ನಡೆದಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ಬೇರೆ ಊರಿನಿಂದ ಬಂದು ಮೊರಬ ಗ್ರಾಮಕ್ಕೆ ಬಂದು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ, ಅವರನ್ನು ಊರಿನಿಂದ ಖಾಲಿ ಮಾಡಿಸಬೇಕೆಂದು ಚಾಸಾಃ 6 ಮತ್ತು ಚಾಸಾಃ 7 ರವರು ನನಗೆ ಹೇಳಿಕೊಟ್ಟ ಪ್ರಕಾರ ಆರೋಪಿತರ ವಿರುದ್ಧ ಸುಳ್ಳು ದೂರನ್ನು

ನೊಂದಣಿ ಮಾಡಲಾಗಿದೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 3 ಮತ್ತು 7 ನೇ ಆರೋಪಿತರ ಪರ ಶ್ರೀ.ಎಸ್.ಸಿ.ಜೆ ವಕೀಲರಿಂದಃ**

35. ಟೇಲರಿಂಗ್ ಅಂಗಡಿ ಬಗ್ಗೆ ಮತ್ತು ಪಾನಶಪ್ ಅಂಗಡಿ ಇದ್ದ ಬಗ್ಗೆ ದಾಖಲಾತಿಗಳನ್ನು ಸಂಗ್ರಹಿಸಿಲ್ಲ ಎನ್ನುವುದಕ್ಕೆ ಸಾಕ್ಷಿ ಸಂಬಂಧಪಟ್ಟ ಅಧಿಕಾರಿಗಳ ಬಳಿ ಏನು ದಾಖಲೆ ಇತ್ತು ಅದನ್ನು ಸಂಗ್ರಹಿಸಿದ್ದೇವೆ ಎಂದು ಹೇಳಿದ್ದಾರೆ. ಟೇಲರಿಂಗ್ ಅಂಗಡಿ ಮತ್ತು ಪಾನಶಪ್ ಅಂಗಡಿ ಬಗ್ಗೆ ಉತಾರೆ ಮತ್ತು ಕಂದಾಯ ಪಾವತಿಸಿದ ರಶೀದಿ ಇಲ್ಲದೇ ಇರುವ ಕಾರಣ ಚಾಸಾಃ 13 ರವರಿಂದ ದಾಖಲೆಗಳನ್ನು ಸೃಷ್ಟಿ ಮಾಡಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ.

36. ಟೇಲರಿಂಗ್ ಅಂಗಡಿ ಮತ್ತು ಪಾನಶಪ್ ಅಂಗಡಿ ನಡೆಸುವ ಬಗ್ಗೆ ಲೈಸನ್ಸ ಹೊಂದಿದ್ದ ಬಗ್ಗೆ ನಾನು ದಾಖಲೆಯನ್ನು ಸಂಗ್ರಹಿಸಿರುವುದಿಲ್ಲ. ಕೃತ್ಯ ನಡೆಯಿತು ಎನ್ನುವ ಸ್ಥಳದಲ್ಲಿ ಟೇಲರಿಂಗ್ ಅಂಗಡಿ ಮತ್ತು ಪಾನಶಪ್ ಅಂಗಡಿ ಇಲ್ಲ ಎನ್ನುವುದು ಸರಿಯಲ್ಲ.

37. ಎಲ್ಲಾ ಆರೋಪಿತರು ಬೇರೆ ಬೇರೆ ವಾಸ ಇರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಕಾರಣ ಅವರು ತನಿಖೆ ಸಮಯದಲ್ಲಿ ತಲೆಮರೆಸಿಕೊಂಡಿದ್ದರು. ಆರೋಪಿತರು ವಾಸ ಇದ್ದ ಮನೆಗಳಿಗೆ ನಮ್ಮ ಸಿಬ್ಬಂದಿಯವರು ಭೇಟಿ ನೀಡಿ ಆರೋಪಿತರು ಇಲ್ಲ ಎಂದು ವರದಿ ನೀಡಿದ್ದಾರೆ. ಆರೋಪಿತರ ಮನೆಗಳಿಗೆ ನಾನು ಭೇಟಿ ನೀಡಿರುವುದಿಲ್ಲ, ನನ್ನ ಸಿಬ್ಬಂದಿಯವರು ಮಾತ್ರ ಭೇಟಿ ನೀಡಿದ್ದರು, ಆ ಕಾರಣ ಆರೋಪಿತರ ಮನೆಗಳು ಎಷ್ಟು ದೂರದಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ.

38. ಆರೋಪಿತರು ಬೇರೆ ಬೇರೆ ವಾಸ ಇರುವುದರಿಂದ ಒಟ್ಟಿಗೆ ಬರಲು ಆಗಿರುವುದಿಲ್ಲ ಎನ್ನುವುದು ಸರಿಯಲ್ಲ. 3 ಮತ್ತು 7 ನೇ ಆರೋಪಿತರು ಕೃತ್ಯ ನಡೆಯಿತು ಎನ್ನುವ ಸಮಯದಲ್ಲಿ ಸ್ಥಳದಲ್ಲಿ ಇರಲಿಲ್ಲ, ಆ ಕಾರಣ ಈ ಪ್ರಕರಣದಲ್ಲಿ ಸಾಕ್ಷಿ ನೀಡಿರುವ ಸಾಕ್ಷಿದಾರರು ಅವರುಗಳ ಇರುವಿಕೆಯ ಬಗ್ಗೆ ಹೇಳಿಲ್ಲ ಎನ್ನುವುದು ಸರಿಯಲ್ಲ.

39. ಕೃತ್ಯವು ರಾತ್ರಿ ಸಮಯದಲ್ಲಿ ಆಗಿದೆ ಎಂದು ಹೇಳಿದ್ದೀರಿ, ಆ ಸಮಯದಲ್ಲಿ ವಿದ್ಯುತ್ ಪೂರೈಕೆ ಆಗುತ್ತಿದ್ದ ಬಗ್ಗೆ ತನಿಖೆ ಮಾಡಿದ್ದೀರಾ ಎನ್ನುವುದಕ್ಕೆ ಸಾಕ್ಷಿ ಆ ಸಮಯದಲ್ಲಿ ವಿದ್ಯುತ್ ಪೂರೈಕೆ ಆಗುತ್ತಿತ್ತು, ಆ ಬಗ್ಗೆ ದೋಷಾರೋಪಣಾ ಪಟ್ಟಿಯೊಂದಿಗೆ ಸಲ್ಲಿಸಿಲ್ಲ ಎಂದು ಹೇಳಿದ್ದಾರೆ. ಕೃತ್ಯ ನಡೆಯಿತು ಎನ್ನುವ ದಿನ ವಿದ್ಯುತ್ ಪೂರೈಕೆ ಇರಲಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

40. ಕಾಂಪ್ಲೇಕ್ಸನ ಮಾಲೀಕರಾದ ಕೇಶವ ಮಾವರಕರ ಹಾಗೂ ಕೃತ್ಯ ನಡೆದ ಸ್ಥಳದ ಅಕ್ಕಪಕ್ಕದ ವ್ಯಕ್ತಿಗಳ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎನ್ನುವುದು ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರುಮಾಡಿರುವ ದಾಖಲೆಗಳನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಆಗದೇ ಇರುವವರ ಮಾತು ಕೇಳಿ ಸಾಕ್ಷಿಗಳನ್ನು ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ.

41. ಆರೋಪಿತರು ದೂರುದಾರರಿಗೆ ಮತ್ತು ಗಾಯಾಳುಗಳಿಗೆ ಜಾತಿ ಹೆಸರು ತೆಗೆದು ಬೈದು ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಸರಿಯಾಗಿ ತನಿಖೆ ಮಾಡದೇ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ತನಿಖೆ ಅವಧಿಯಲ್ಲಿ ಆರೋಪಿತರು ತಪ್ಪು ಮಾಡಿಲ್ಲ ಎಂದು ಕಂಡು ಬಂದರೂ ಸಹ ಆರೋಪಿತರು ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 4, 8, 10 ಮತ್ತು 11 ನೇ ಆರೋಪಿತರ ಪರ ಶ್ರೀ.ಯು.ಬಿ.ಜೆ ವಕೀಲರಿಂದ**

ಶ್ರೀ.ಎಸ್.ಸಿ.ಜೆ ವಕೀಲರು ಮತ್ತು ಶ್ರೀ.ಆರ್.ಸಿ.ಪಿ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.